ಅವರ ಕೆಲಸಕ್ಕೆ ಅಡ್ಡ ಬರುವುದು ಮತ್ತದೇ ಅಡ್ಮಿಷನ್! ಪ್ರತಿ ಸರ್ಕಾರೇತರ ಶಾಲೆಯೂ ಕಡ್ಡಾಯವಾಗಿ ಶೇ. 25ರಷ್ಟು ಸೀಟ್‌ಗಳನ್ನ ಆರ್‌ಟಿಇಗೋಸ್ಕರವೆಂದು ಇಟ್ಟು, ಆ ಸೀಟ್‌ಗಳು ಕಡಿಮೆ ಆದಾಯ ವರ್ಗದ ಮಕ್ಕಳಿಗೆ ಕಡ್ಡಾಯವಾಗಿ ಸಿಗುವ ನಿಟ್ಟಿನಲ್ಲಿ ಬೇಕಿರುವ ಕ್ರಮಗಳನ್ನ ತೆಗೆದುಕೊಳ್ಳಬೇಕು ಎಂದು ರಾಜ್ಯ ಸರ್ಕಾರ ಹೇಳುತ್ತದೆ. ಅಡ್ಮಿಶನ್‌ಗೆಂದು ಮಾತ್ರ ಸರ್ಕಾರ ಹನ್ನೊಂದು ಸಾವಿರ ಎಂಟು ನೂರು ರೂಪಾಯಿ ಸಹಾಯವನ್ನೂ ಮಾಡುತ್ತದೆ. ಅದು ನೇರ ಶಾಲೆಗೇ ಹೋಗುತ್ತದೆ. ಆರ್‌ಟಿಇ ಸಾಧ್ಯವಾಗಿದೆಯೇ, ಕನಿಷ್ಠ ಕೆಲ ಮಕ್ಕಳಿಗಾದರೂ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಅಡ್ಮಿಷನ್ ಸಿಕ್ಕಿದೆಯೇ ಅಂದು ಕೇಳಿದರೆ ನಾಗಸಿಂಹ ಆರ್‌ಟಿಇ ಲೋಕದ ಚಿತ್ರ ವಿಚಿತ್ರ, ರೋಚಕ ಕತೆಗಳನ್ನ ಹೇಳುತ್ತಾರೆ.



### ಆರ್‌ಟಿಎನಲ್ಲೂ ವಂಚನೆ

'ಸರ್ಕಾರೇತರ ಅಂದ್ರೆ ಖಾಸಗಿ ಅಂತಾರಲ್ಲ ಆ ಶಾಲೆಗಳಲ್ಲಿ 1,15,000 ಆರ್‌ಟಿಇ ಸೀಟ್‌ಗಳಿವೆ. ಆದರೆ ಮೂರು ಲಕ್ಷಕ್ಕೂ ಅಧಿಕ ಅಪ್ಲಿಕೇಶನ್ ಬರತ್ತೆ. ಮಕ್ಕಳಿಗಾಗಿ, ಅವರ ಶಿಕ್ಷಣಕ್ಕಾಗಿ ಎಷ್ಟೆಷ್ಟೋ ರೂಲ್ಸ್ ಇವೆ. ಅವನ್ನ ಪರಿಪಾಲಿಸುತ್ತಾರಾ ಅನ್ನುವುದು ದೊಡ್ಡ ಪ್ರಶ್ನೆ. ಉದಾಹರಣೆಗೆ ನೋಡಿ ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿರುವ ಆ ಶಾಲೆ. ಕಷ್ಟಪಟ್ಟು ಒಂಬತ್ತು ಮಕ್ಕಳಿಗೆ ಅಲ್ಲಿ ಸೀಟ್ ಸಿಕ್ತು. ಅವರಲ್ಲಿ ಒಬ್ಬರು ಟೀ ಮಾರುವ ಪೋಷಕರು. ಅವರಿಗೆ ಸ್ಕೂಲ್ ಹೇಳ್ತು ಇಂತಿಂತಹ ಫೀಸ್ ಕಟ್ಟಿ. ಅದರಲ್ಲಿ ನಲವತ್ತು ಪೌಂಡ್ ಅಂತ ಇತ್ತು. ಅವರಿಗೆಲ್ಲಿ ಪೌಂಡ್ ಕೊಡಲು ಆಗತ್ತೆ? ನಾನು ಪ್ರಿನ್ಸಿಪಾಲರ ಜೊತೆ ಮಾತಾಡಿದೆ. ಅವರು ಹೇಳಿದ್ದು ಏನಂದರೆ ಶಾಲೆ ಸ್ಕಾಟ್ಲೆಂಡ್‌ನಲ್ಲಿ ರಿಜಿಸ್ಟರ್ ಆಗಿದೆ. ಮಕ್ಳು ಪ್ರತಿ ತಿಂಗಳೂ ನಲವತ್ತು ಪೌಂಡ್ ಕೊಡಬೇಕು. ಕೊಡಕ್ಕಾಗಲ್ಲ ಅಂದ್ರೆ ಮಗುವನ್ನ ಕರ್ಕೊಂಡ್ಹೋಗಿ ಬೇರೆ ಕಡೆ ಅಡ್ಮಿಷನ್ ಮಾಡ್ಸಿ. ಅದು ಒಂದು ಕಡೆ ಆದರೆ, ಇನ್ನೊಂದು ಕಡೆ ಪೋಷಕರೇ ಮೋಸ ಮಾಡುತ್ತಾರೆ. ಆರ್‌ಟಿಇ ಇರುವುದು ದುರ್ಬಲ ವರ್ಗದ ಬಡ ಮಕ್ಕಳಿಗೆ ಅಂತ. ಆದ್ರೆ ಮಧ್ಯಮ ವರ್ಗದ, ಡೀಸೆಂಟ್ ಉದ್ಯೋಗದಲ್ಲಿರೋ ಪೋಷಕರೂ ಅದರ ಲಾಭ ಪಡೀತಾರೆ. ಆ ದುರ್ಬಲ ವರ್ಗದ ಪೋಷಕರ ಪರವಾಗಿ ನಾವು ಶ್ರಮಿಸುತ್ತೀವಿ. ಆದರೆ ಆ ಒಂದು ಪ್ರಕ್ರಿಯೆಯಲ್ಲಿ ಸಮಯ ಮತ್ತು ಶಕ್ತಿ ಖರ್ಚಾಗತ್ತೆ ಹೊರತು ನ್ಯಾಯ ಸಿಕ್ಕೋದು ಅಪರೂಪ. ಮಗುವಿಗೆ ಆರ್‌ಟಿಇ ಅಡಿಯಲ್ಲಿ ಅಡ್ಮಿಷನ್ ಸಿಕ್ಕಿದರೂ ಆ ಮಗುವಿಗೆ ಶಾಲೆಯಲ್ಲಿ ಟೀಚರ್ಸ್ ಕಡೆಯಿಂದ, ಆಫೀಸ್ ಕಡೆಯಿಂದ ಸಿಕ್ಕುವ ಟ್ರೀಟ್ಮೆಂಟೇ ಬೇರೆ. ಆ ಮಗುವನ್ನ ಉಪೇಕ್ಷಿಸಿ ಬಿಡ್ತಾರೆ. ಮಗುವಿಗೂ ಆ ವ್ಯತ್ಯಾಸ ಗೊತ್ತಾಗತ್ತೆ. ಪೋಷಕರಿಗೆ ಅದು ಪ್ರೈವೇಟ್ ಶಾಲೆ, ಇಂಗ್ಲಿಷ್ ಬರಲ್ಲ, ಹೆದರಿಕೆ, ಕೀಳರಿಮೆ. ಸುಮ್ಮನಾಗಿಬಿಡುತ್ತಾರೆ. ಹೇಗೆ ಇದನ್ನೆಲ್ಲಾ ಪ್ರೂವ್ ಮಾಡೋದು? ಪಾಪ, ಅವ್ರೇ 'ಪರ್ವಾಗಿಲ್ಲ ಬಿಡಿ ಸಾರ್, ಯಾವ್ದೋ ಸುಮಾರಾಗಿರೋ ಸ್ಕೂಲ್ಗೆ ಹಾಕ್ತೀವಿ' ಅಂತಾರೆ. ಪುನಃ ಅವರೇ ಮತ್ತೆ ಡೊನೇಶನ್ ಕಟ್ಟಬೇಕು, ಫೀಸ್ ಕಟ್ಟಬೇಕು. ಅಲ್ಲಿಗೆ ನಮ್ಮ ಆರ್‌ಟಿಇ ಕಾರ್ಯಕ್ರಮದ ಉದ್ದೇಶ ಏನಾಯ್ತು!

ಆರ್‌ಟಿಇ ಅಂದ್ರೆ ಅದೂ ಕೂಡ ಒಂದು ಶೋಷಣೆಯ ಕಾಯಿದೆ ಅಂತಾಗಿದೆ. ಸರ್ಕಾರ ಹೇಳಿದ ಪ್ರಕಾರ ಶೇ. 25ರ ಕಾಯಿದೆ ಹಿಡಿದುಕೊಂಡು ಬಡ ಕುಟುಂಬಗಳು ಪ್ರತಿಷ್ಠಿತ ಇಂಗ್ಲಿಷ್ ಶಾಲೆಗೆ ಹೋಗಿ ಮಗುವಿಗೆ ಸೀಟ್ ಕೇಳ್ತಾರಾ, ನೀವೇ ಊಹಿಸಿಕೊಳ್ಳಿ. ಯಾವ ಶಾಲೆ ಆರ್‌ಟಿಇ ಸೀಟ್ ಕೊಡೊತ್ತೋ ಅದೂ ಒಂದು ಬ್ಯುಸಿನೆಸ್ ಥರ ಆಗಿದೆ. ಅವರಿಗೆ ಒಂದಷ್ಟು ಹಣ ಸಿಗುತ್ತಲ್ಲ. ಹನ್ನೆರಡು ಸಾವಿರ ಸರ್ಕಾರದಿಂದ ಬರತ್ತಲ್ಲ ಅದೂ ಲಾಭಾನೇ. ನಾವು ಪೋಷಕರಿಗೆ ಹೇಳ್ತೀವಿ – ಶಾಲೆಯಿಂದ ರಸೀದಿ ತೊಗೊಳ್ಳಿ ಅಂತ. ಶಾಲೆ ರಸೀದಿ ಕೊಡಲ್ಲ. ಇತ್ತೀಚೆಗೆ ಒಬ್ಬರು ಪೋಷಕರು ಬಲು ಗೋಗೆರೆದು ರಸೀದಿ ಇಸ್ಕೊಂಡು ಬಂದು ತೋರ್ಸಿದ್ರು. ಅದರಲ್ಲಿ ಫೀಸ್ ಪಟ್ಟಿ ಇತ್ತು. ಏನಂದ್ರೆ ಆ ಎಲ್‌ಕೆಜಿ ಹೆಣ್ಣು ಮಗುವಿಗೆ ಸ್ಕೂಲಲ್ಲಿ ಭರತನಾಟ್ಯ ಕಲೀಲಿಕ್ಕೆ 2,000; ಮೈಸೂರು ಟ್ರಿಪ್ಗೆ 3,500; ಕರಾಟೆ ಕಲಿಯೋದಿಕ್ಕೆ 2,500; ಇನ್ನೂ ತಮಾಷೆ ಕೇಳಿ – ಸ್ಟಾರ್ ಗೇಜಿಂಗ್ ಅಂತ 1,500 ಹಾಕಿದ್ದಾರೆ. ಮಗು ದಿನದ ವೇಳೆಯಲ್ಲಲ್ವಾ ಅಲ್ಲಿರೋದು, ಅದ್ಯಾವಾಗ ನಕ್ಷತ್ರ ನೋಡತ್ತೆ? ಯಾರು ಕೇಳೋದು ಇದನ್ನೆಲ್ಲಾ? ಕೇಳಿದಷ್ಟು ದುಡ್ಡು ಕೊಟ್ರೆ ಸ್ಕೂಲ್ ಸೀಟ್ ಸಿಗತ್ತೆ. ಬರೀ ಅಪ್ಲಿಕೇಶನ್ ತೊಗೊಳಕ್ಕೆ ಬೆಳಗಿನ ಜಾವದಿಂದಲೇ ಕ್ಯೂ ನಿಲ್ತಾರೆ. ಅದು ಗೊತ್ತಿರೋದ್ರಿಂದ ಆ ಪ್ರೈವೇಟ್ ಸ್ಕೂಲ್ಗಳು ಆರ್‌ಟಿಇ ಬೇಡ ಅಂತ ಪ್ರತಿರೋಧ ತರ್ತಿದ್ದಾರೆ. ಆ ಶೇ. 25 ಇಲ್ಲ ಅಂದ್ರೆ

